ಓ.ಎಸ್.198/2017 ಪ್ರತಿವಾದಿ ನಂ:8/ ಡಿಂಡಬ್ಲು-3

ಮಹಿಬೂಬಸಾಬ ತಂದೆ ಬಾಷಾಸಾಬ

ದಿ.06-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು : ವಾದಿಯರ ಪರ ವಕೀಲರಾದ ಶ್ರಿ ಕೆ.ಕೆ.ವಿ ರವರಿಂದ :-**

ಕನ್ನಡ ಓದಲು ಮತ್ತು ಬರೆಯಲು ಬರುತ್ತದೆಯೇ ಎಂದರೆ ಸಾಕ್ಷಿಯು ಇಲ್ಲ ಸಹಿ ಮಾತ್ರ ಮಾಡುತ್ತೇನೆ ಎಂದು ನುಡಿಯುತ್ತಾರೆ. ನಿಮ್ಮ ಮುಖ್ಯ ವಿಚಾರಣೆಯಲ್ಲಿನ ವಿಷಯಗಳನ್ನು ನೀವೆ ಹೇಳಿ ಬರೆಸಿರುತ್ತಿರಾ ಎಂದರೆ ಸಾಕ್ಷಿಯು ಹೌದು ನಾನೇ ಹೇಳಿ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ಪ್ರಸ್ತುತ ದಾವೆ ಯಾರು ಯಾರ ವಿರುದ್ಧ ಹೂಡಿರುತ್ತಾರೆ ಎಂದರೆ ಸಾಕ್ಷಿಯು ದೇವಪ್ಪನ ಅಣ್ಣ ತಮ್ಮಂದಿರು ಹೂಡಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯರು ಮಾರಾಟ ಮಾಡಿದ ಆಸ್ತಿಯ ಮೇಲೆ ದಾವೆ ಹೂಡಿರುತ್ತಾರೆ ಎಂದರೆ ಸಾಕ್ಷಿಯು ಖರೀದಿ ಮಾಡುವಾಗ ಯಾರು ತಕರಾರು ಮಾಡಿರುವುದಿಲ್ಲ, ಖರೀದಿ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ದೇವಪ್ಪ ಮಾರಾಟ ಮಾಡುತ್ತಾನೆ ಎನ್ನುವ ವಿಷಯ ತಿಳಿದ ಬಳಿಕ ವಾದಿಯರು ಈ ದಾವೆ ಸಲ್ಲಿಸಿರುತ್ತಾರೆ ಎಂಬ ವಿಷಯ ನಿಮಗೆ ಗೊತ್ತಿದ್ದರೂ ಕೂಡ ಸುಳ್ಳು ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ. ವಾದಿಯರು ತಹಶೀಲ್ದಾರ ಮುಂದೆ ದೇವಪ್ಪನಿಂದ 2ನೇ ಪ್ರತಿವಾದಿಯಾದ ಮಲ್ಲಮ್ಮಳಿಗೆ ಸ.ನಂ: 87* ಹಿಸ್ಸಾ-2 ರ ಜಮೀನು ವರ್ಗಾವಣೆಯಾಗಬಾರದೆಂದು ತಕರಾರು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 2ನೇ ಪ್ರತಿವಾದಿಯ ಹೆಸರಿಗೆ ಆದ ಬಳಿಕ ನಾನು ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಸ.ನಂ: 87* ಹಿಸ್ಸಾ-2 ನ್ನು ಖರೀದಿ ಮಾಡುವ ಉದ್ದೇಶದಿಂದ ತಹಶೀಲ್ದಾರರಿಗೆ ಹಣ ನೀಡಿ ಆಕೆಯ ಹೆಸರಿಗೆ ವರ್ಗಾವಣೆ ಮಾಡಿಸಿರುತ್ತಿರಿ ಎಂದರೆ ಸರಿಯಲ್ಲ. ಈ ದಾವೆ ಚಾಲ್ತಿಯಲ್ಲಿದ್ದಾಗ ಅವಿಭಕ್ತ ಕುಟುಂಬದ ಆಸ್ತಿಯಾದ ಸ.ನಂ: 87* ಹಿಸ್ಸಾ-2 ನ್ನು ಉದ್ದೇಶಪೂರ್ವಕವಾಗಿ ಖರೀದಿ ಮಾಡಿರುತ್ತಿರಿ ಎಂದರೆ ಸರಿಯಲ್ಲ. ನಿಮ್ಮ ಮುಖ್ಯವಿಚಾರಣೆಯಲ್ಲಿ ಬರೆದ ವಿಷಯಗಳು ಸುಳ್ಳಿವೆ ಎಂದರೆ ಸರಿಯಲ್ಲ. ವಾದಿಯರನ್ನು ಮೋಸ ಮಾಡುವ ಉದ್ದೇಶದಿಂದ ಸ.ನಂ: 87* ಹಿಸ್ಸಾ-2 ನ್ನು ಖರೀದಿ ಮಾಡಿರುತ್ತಿರಿ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ಸ.ನಂ: 87* ಹಿಸ್ಸಾ-2 ನ್ನು ಅಭಿವೃದ್ಧಿ ಮಾಡಬಾರದೆಂದು ನ್ಯಾಯಾಲಯವು ತಡೆಯಾಜ್ಞೆ ಆದೇಶ ಚಾಲ್ತಿಯಲ್ಲಿದೆ ಎಂದು ಗೊತ್ತಿದ್ದರೂ ಕೂಡ ಅಭಿವೃದ್ಧಿ ಮಾಡಿರುತ್ತಿರಿ ಎಂದರೆ

ಸರಿಯಲ್ಲ. ವಾದಿಯರ ಮತ್ತು ಇತರೆ ಪ್ರತಿವಾದಿಯರ ಹಕ್ಕನ್ನು ಮುಳುಗಿಸುವ ಉದ್ದೇಶದಿಂದ ಖರೀದಿ ಪತ್ರ ಬರೆಯಿಸಿಕೊಂಡಿರುತ್ತಿರಿ ಎಂದರೆ ಸರಿಯಲ್ಲ.

**ಪಾಟೀ ಸವಾಲು : 1, 5 ರಿಂದ 7 ಮತ್ತು 9 ರಿಂದ 15 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಪಿ.ಎಮ್.ಬಿ ರವರಿಂದ**

1, 5 ರಿಂದ 7 ಮತ್ತು 9 ರಿಂದ 15 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಪಿ.ಎಮ್.ಬಿ ರವರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿದ ಕಾರಣ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲು : 2 ರಿಂದ 4ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎನ್.ಎಲ್.ಹೆಚ್ ರವರಿಂದ**

2 ರಿಂದ 4ನೇ ಪ್ರತಿವಾದಿಯರನ್ನು ಹಾಗೂ ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಗಿ, ಹಾಜರಿಲ್ಲದ ಕಾರಣ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಲಿಂಗಸಗೂರು.